ಕೊಟ್ಟ ಮಾತಿಗೆ ತಪ್ಪದಂತೆ ಮರುದಿನ ತಮ್ಮ ಭಿಕ್ಕು ಪರಿವಾರದೊಂದಿಗೆ ಆಗಮಿಸಿದರು. ನಾನು ಮೃಷ್ಟಾನ್ನ ಭೋಜನವನ್ನೇ ತಯಾರಿಸಿದ್ದರೂ ತಮ್ಮ ಬೋಗುಣಿಯಲ್ಲಿ ತಮಗೆಷ್ಟು ಬೇಕೋ ಅಷ್ಟೇ ಅನ್ನವನ್ನು ಮಾತ್ರ ಬಡಿಸಿಕೊಂಡು ತಿಂದರು. ಅವರ ಸರಳತೆ, ತುಂಬಿ ತುಳುಕುವ ಜ್ಞಾನದ ಔದಾರ್ಯತೆ ಕಂಡು ಜೀವನ ಪಾವನವಾಗಬೇಕೆಂದರೆ ನಾನೂ ಸರ್ವಸಂಗ ಪರಿತ್ಯಾಗಿಯಾಗಿ ಅವರ ಸಂಗಡ ತೆರಳಬೇಕೆನಿಸಿತು. ಹೇಳಿದೆ. ನಮ್ಮ ಧರ್ಮದಲ್ಲಿ ಹೆಣ್ಣು ಭಿಕ್ಕುವಾಗಲು ಸಾಧ್ಯವಿಲ್ಲ, ಬೇಕಾದರೆ ಪರಿಪಾಲಕರಾಗಿ ಸೇರಬಹುದೆಂದರು. 'ಆಗಲಿ. ಹೇಗೋ ನಿಮ್ಮ ಜ್ಞಾನದ ಬೆಳಕು ನಮ್ಮೆಡೆಗೆ ಪಸರಿಸಿದರೆ ಅದೇ ಸಾಕು' ಎಂದು ನನ್ನೆಲ್ಲ ಆಸ್ತಿಯನ್ನು ಸಂಘಕ್ಕೆ ತ್ಯಾಗ ಮಾಡಿದೆ. ಅಲ್ಲೇ ಬುದ್ಧ ವಿಹಾರ ಕಟ್ಟಿಸುವುದಾಗಿ ಮಾತುಕೊಟ್ಟೆ.

## ಅಂಗುಲಿಮಾಲಾ

ಕೋಸಲದ ಶ್ರಾವಸ್ಥಿಯ ಬಳಿ ಜಾಲಿನೀ ವನದ ಕಾಡಿನ ಕಣಿವೆಯಲ್ಲಿ ನಾನು ವಾಸ ಮಾಡಿಕೊಂಡಿದ್ದೆ. ಮಿತಾಯನ ಮುನಿಯಿಂದ ಶಿಷ್ಯತ್ವವನ್ನು ಪಡೆದು ಅಲ್ಪಸ್ವಲ್ಪ ಆರಂಭಿಕ ವಿದ್ಯೆಯನ್ನು ಕಲಿತಿದ್ದೆ. ಊರಿಗೆ ಹಿಂದಿರುಗಿ ತಂದೆ ಗಗ್ಗ ಹಾಗೂ ತಾಯಿ ಮಂತಣಿಯವರ ಸೇವೆ ಮಾಡಿಕೊಂಡು ಸಂಸಾರದೊಂದಿಗೆ ಸುಖವಾಗಿರಬೇಕೆಂಬ ಕನಸು ನನದಾಗಿತ್ತು. ಆದರೆ ವೃದ್ಧರಾಗಿದ್ದ ಗುರು ಮಿತಾಯನರು ತನಗೆ ಸೇವೆ ಮಾಡುವ ಶಿಷ್ಯರಿಲ್ಲವೆಂದೋ ಏನೋ ನನಗೆ ಮನೆಗೆ ಕಳುಹಿಸಲು ಸಿದ್ಧರಿರಲಿಲ್ಲ. ನಾನು, 'ಇಲ್ಲ, ನಾನು ಊರಿಗೆ ಹಿಂದಿರುಗಲೇಬೇಕು' ಎಂದು ಹಟ ಹಿಡಿದೆ. ವಾಗ್ವಾದವೇ ನಡೆಯಿತು. 'ಹಾಗಾದರೆ ಇಷ್ಟು ದಿನ ನನ್ನಿಂದ ಕಲಿತೆಯಲ್ಲ, ಅದಕ್ಕೆ ಗುರುದಕ್ಷಿಣೆಯನ್ನು ಕೊಟ್ಟು ಹೋಗು' ಎಂದುಬಿಟ್ಟರು. 'ಪುಟ್ಟ ಬಾಲಕನಾಗಿದ್ದಾಗಿನಿಂದಲೂ ನಿಮ್ಮೊಡನೇ ಇದ್ದೇನೆ. ನನ್ನದು ಎಂಬಂಥ ಯಾವ ದುಡಿಮೆ ನನಗಿದೆ ಹೇಳಿ?' ಎಂದವನು, 'ಊರಿಗೆ ಹೋಗಿ ಬರಲು ಅವಕಾಶ ಮಾಡಿಕೊಟ್ಟರೆ, ಬೇಕಾದರೆ ತಂದೆ ತಾಯಿಯರಿಂದ ಪಡೆದು ಬಂದಾದರೂ ನಿಮ್ಮ ಗುರುದಕ್ಷಿಣೆ ತೀರಿಸುವೆ' ಎಂದೆ. ಅದಕ್ಕವರು, 'ಒಮ್ಮೆ ಇಲ್ಲಿಂದ ಹೋದವರು ತಿರುಗಿ ಬರುವರೇ? ಅದು ನಿನ್ನ ಭ್ರಮೆ. ನೀನು ಇಲ್ಲೇ ದುಡಿದು, ಸಂಗ್ರಹಿಸಿ, ನನಗೆ ನೀಡಿ ಹೋಗಬೇಕು. ನನಗೋ ವಯಸ್ಸಾಗಿದೆ. ಸಾಯುವವರೆಗಾದರೂ ಬದುಕಿರಲು ಆಸರೆ ಬೇಕಲ್ಲ' ಎಂದರು.

ಹೋಗಲಿ ಗುರುದಕ್ಷಿಣೆ ಎಷ್ಟು ಎಂದಾದರೂ ಹೇಳಿದರೆ ಅದನ್ನು ದುಡಿದು ತೀರಿಸಲು ಪ್ರಯತ್ನಿಸುವೆ' ಎಂದೆ. 'ನನ್ನಿಂದ ಹತ್ತು ವರುಷ ಶಿಕ್ಷಣ ಪಡೆದಿದ್ದೀಯ. ವರ್ಷಕ್ಕೆ ನೂರರಂತೆ ಸಾವಿರ ನಾಣ್ಯಗಳನ್ನು ಕೊಟ್ಟು ನೀನು ಹೋಗಬಹುದು' ಎಂದು ನಿರ್ದಾಕ್ಷಿಣ್ಯವಾಗಿ ಹೇಳಿದರು.

'ಸಾವಿರ ನಾಣ್ಯಗಳೇ? ಅಷ್ಟಕ್ಕೂ ಈ ಜನ್ಮದುದ್ದಕ್ಕೂ ದುಡಿದರೂ ಅಷ್ಟನ್ನು ಗಳಿಸಲು ಸಾಧ್ಯವಿಲ್ಲವಲ್ಲ' ಎಂದೆ. 'ನೀನು ದುಡಿದು ತೀರಿಸುತ್ತೀಯೋ, ತಲೆ ಒಡೆದು ತೀರಿಸುತ್ತೀಯೋ ನನಗೆ ಗೊತ್ತಿಲ್ಲ. ನನ್ನ ಶುಲ್ಕವನ್ನು ನೀಡದೇ ತಪ್ಪಿಸಿಕೊಂಡು ಓಡಿಹೋದರೆ ನೀನು ಈವರೆಗೆ ಗಳಿಸಿದ್ದ ವಿದ್ಯೆಯೆಲ್ಲಾ ನಶಿಸಿಹೋಗುತ್ತದೆ' ಎಂದು ಶಾಪ ಹಾಕುವವರಂತೆ ಭಯ ಹುಟ್ಟಿಸಿದರು. ಅವರು ಸಾಯುವವರೆಗೂ ನಾನು ಅವರ ಸೇವೆ ಮಾಡಿಕೊಂಡು ಇಲ್ಲಿಯೇ ಇರಬೇಕೆಂಬುದು ಅವರ ಬಯಕೆಯಾಗಿದ್ದು ನನ್ನನ್ನು ಮಾತಿನ ಮೂಲಕ ಕಟ್ಟಿಹಾಕುತ್ತಿದ್ದರು. ನನಗೋ ಸ್ವಗೃಹದ ಆಕರ್ಷಣೆ, ಪಾಲಕರನ್ನು ಕಾಣುವ ಹಂಬಲವನ್ನು ಹತ್ತಿಕ್ಕಲು ಸಾಧ್ಯವೇ ಇಲ್ಲವೇನೋ ಎಂಬಷ್ಟು ತೀವ್ರವಾಗಿ ಕಾಡುತ್ತಿತ್ತು. ಯೋಚಿಸಿದೆ. ಅವರಿಗೆ ಹೊಸ ಶಿಷ್ಯರನ್ನು ನಿಯಮಿಸಿಕೊಂಡು ಪಾಠ ಹೇಳಿಕೊಡುವಷ್ಟು ಶಕ್ತಿ ಉಳಿದಿಲ್ಲ. ಸಾಯುವವರೆಗೆ ಅವರಿಗೂ ಆಹಾರಕ್ಕೆ, ಔಷಧಿಗೆ ಹಣ ಬೇಕಲ್ಲ. ತಂದುಕೊಡುವವರು ಯಾರೂ ಇಲ್ಲ. ಅದಕ್ಕೇ ನನ್ನನ್ನು ಮಾತಿನ ಬಂಧನದಲ್ಲಿ ಕಟ್ಟಿಹಾಕುತ್ತಿದ್ದಾರೆ. ಆದರೆ ಅವರು ಸಾಯುವವರೆಗೆ ಸೇವೆ ಮಾಡಿಕೊಂಡಿರಲು ನನಗೆ ಸಾಧ್ಯವಾಗುತ್ತಿಲ್ಲ. ಏನು ಮಾಡುವುದು ಎಂದು ಬಹುವಾಗಿ ಚಿಂತಿಸಿದೆ. ದ್ವಂದ್ವದಲ್ಲಿ ತೊಳಲಾಡಿದೆ. ಕೊನೆಗೆ ಹೇಗಾದರೂ ಮಾಡಿ ಗುರುದಕ್ಷಿಣೆ ತೀರಿಸಿಯೇ ಹೋಗುವುದೆಂದು ನಿರ್ಧರಿಸಿದೆ.

ಅವರು ಹೇಳಿದಷ್ಟು ಹಣವನ್ನು ಈ ಜನ್ಮದುದ್ದಕ್ಕೂ ದುಡಿದರೂ ತೀರಿಸಲು ಸಾಧ್ಯವಿಲ್ಲ ಎಂದು ಚಿಂತಿಸುತ್ತಿರುವಾಗ, ಅವರು ಹೇಳಿದ್ದ 'ತಲೆ ಒಡೆದಾದರೂ ತೀರಿಸು' ಎಂಬ ಮಾತು ಪದೇ ಪದೇ ನನ್ನ ಕಿವಿಯಲ್ಲಿ ಅನುರಣಿಸಿತು. ಸರಿ, ತಲೆ ಒಡೆದೇ ತೀರಿಸುವುದೆಂದು ನಿರ್ಧರಿಸಿದೆ. ಆದರೆ ಅವರ ಬಳಿಯಲ್ಲಾದರೂ ಅಷ್ಟು ಹಣ ಸಿಕ್ಕಬೇಕಲ್ಲ? ಎಷ್ಟು ಜನರ ತಲೆಯೆಂದು ಒಡೆಯುವುದು? ಎಂಬ ಸಂದಿಗ್ಧಕ್ಕೀಡಾದೆ. ಆಗ ಗುರುಗಳೇ, 'ಸಾವಿರ ನಾಣ್ಯಗಳಲ್ಲದಿದ್ದರೆ ಸಾವಿರ ಹೆಬ್ಬೆರಳುಗಳನ್ನು ತಂದಾದರೂ ನನ್ನ ಋಣ ತೀರಿಸಿ ಹೋಗು' ಎಂದಂದು ಮುಂದಿನ ಮಾತಿಗೆ ಅವಕಾಶ ನೀಡದೇ ನಿರಾಸೆಯಿಂದ ಎದ್ದು ಹೋಗಿಬಿಟ್ಟಿದ್ದರು. ಹಾಗೇ ಯೋಚಿಸಿದೆ. ದ್ರೋಣಾಚಾರ್ಯರು ಶಿಷ್ಯ ಏಕಲವ್ಯನಲ್ಲಿ ಅವನ ಬಲಗೈ ಹೆಬ್ಬೆರಳನ್ನು ಗುರುದಕ್ಷಿಣೆಯಾಗಿ ಕೇಳಿದ್ದ ಕಥೆಯನ್ನು ಕೇಳಿ ತಿಳಿದಿದ್ದೆ. ಅದರ ಹಿಂದಿನ ಉದ್ದೇಶ ಅವನು ಮುಂದೆ ಬಿಲ್ಲನ್ನು ಹೆದೆಯೇರಿಸಿ ಬಾಣವನ್ನು ಮೀಂಟಲು ಸಾಧ್ಯವಾಗಬಾರದೆಂದು. ಬಹುಶಃ ನನ್ನ ಗುರುಗಳೂ ನನ್ನ ಹೆಬ್ಬೆರಳನ್ನು ಕತ್ತರಿಸಿಕೊಟ್ಟು ಹೋಗು ಎಂದಿದ್ದರೆ ಮುಲಾಜಿಲ್ಲದೆ ಕತ್ತರಿಸಿಕೊಟ್ಟು ಹೋಗುತ್ತಿದ್ದೆನೇನೋ. ಹಾಗೇ ಹೋದೇನು ಎಂದೇ ಅವರು ಸಾವಿರ ಹೆಬ್ಬೆರಳು ಅಂದಿದ್ದಾರೆ ಎಂದು ತರ್ಕಿಸಿದೆ.

ಸರಿ, ನನ್ನ ಕಾಯಕ ಶುರುಮಾಡಿದೆ. ಶ್ರಾವಸ್ಥಿಯೆಡೆಗೆ ಸುತ್ತಮುತ್ತಲ ಹಳ್ಳಿಗಳಿಂದ ಬರುತ್ತಿದ್ದ ಜನರ ಬಳಿ ಮೊದಮೊದಲು ನಗನಾಣ್ಯ ಕೊಡುವಂತೆ ಕೇಳುತ್ತಿದ್ದೆ. ಸುಮ್ಮಸುಮ್ಮನೆ ಯಾರು ಕೊಡುತ್ತಾರೆ? ಬಲವಂತ ಮಾಡಲಾರಂಭಿಸಿದೆ. ಅವರ ಬಳಿ ನಗನಾಣ್ಯ ಕೊಡುವುದಿಲ್ಲವೆಂದಾದರೆ ಬಲಗೈ ಹೆಬ್ಬೆರಳನ್ನು ಕತ್ತರಿಸಿಕೊಳ್ಳಲಾರಂಭಿಸಿದೆ. ನೋವಿನಿಂದ ಅವರು ಚೀರುತ್ತಾ ಓಡುತ್ತಿದ್ದರು. ಕತ್ತಿಯನ್ನು ಎತ್ತಿದಾಗ ಸ್ವಾಭಾವಿಕವಾಗಿ ಅವರ ಜೀವವನ್ನು ಉಳಿಸಿಕೊಳ್ಳಲು ಎರಡೂ ಕೈಗಳಲ್ಲಿ ಕತ್ತಿಯನ್ನು ಬಲವಾಗಿ ಹಿಡಿದುಕೊಳ್ಳುತ್ತಿದ್ದರು. ಆಗ ಕತ್ತಿಯನ್ನು ಬಲವಾಗಿ ಕೆಳಕ್ಕೆಳೆದರೆ ಸಾಕು, ಸ್ವಾಭಾವಿಕವಾಗಿ ಬೆರಳುಗಳು ಕಳಿತ ಬಾಳೆಹಣ್ಣಿನಂತೆ ತಾನಾಗಿಯೇ ನೆಲಕ್ಕುರುಳಿ ಬೀಳುತ್ತಿದ್ದವು. ಬಲಗೈಯಾದರೇನು, ಎಡಗೈಯಾದರೇನು? ಗುರುಗಳಿಗೇನು ಗೊತ್ತಾಗುತ್ತದೆ? ಎಂಬ ಭಂಡ ಧೈರ್ಯದ ಮೇಲೆ ಸಿಕ್ಕ ಬೆರಳುಗಳನ್ನೆಲ್ಲ ಸಂಗ್ರಹಿಸಲಾರಂಭಿಸಿದೆ. ಒಮ್ಮೆ ಹಾಗೆ ಕತ್ತರಿಸಿದ ಬೆರಳುಗಳನ್ನೆಲ್ಲ ಮರದಡಿಯಲ್ಲಿರಿಸಿ, ನಾನು ಕಿರಿದಾದ ಆ ಕಣಿವೆಯಲ್ಲಿ ಹಾದು ಹೋಗುವವರಿಗಾಗಿ ಚಿರತೆಯೊಂದು ನೀರ ಬಳಿ ಅಡಗಿ ಬೇಟೆಗೆ ಕಾಯುವಂತೆ ಕಾಯುತ್ತಿದ್ದೆ. ಬರಬರುತ್ತಾ, ಅವರ ನಗನಾಣ್ಯ ದೋಚುವ, ಬೆರಳ ಕತ್ತರಿಸಿಕೊಳ್ಳುವ ಚಕಮಕಿಯಲ್ಲಿ ಕತ್ತಿಯು ಅವರ ಕುತ್ತಿಗೆಗೂ ತಾಗಿ ಕೆಲವರ ಪ್ರಾಣವೂ ಹೊರಟುಹೋಗುತ್ತಿತ್ತು. ಸತ್ತ ಅವರ ದೇಹದಿಂದ ನನಗೇನು ಪ್ರಯೋಜನ? ಬೆರಳುಗಳನ್ನಷ್ಟೇ ಕತ್ತರಿಸಿಕೊಂಡು ಶವವನ್ನು ಎತ್ತಿ ಅತ್ತ ಕಣಿವೆಯ ಇಳಿಜಾರಿಗೆ ಎಸೆಯುತ್ತಿದ್ದೆ.

ಹಾಗೆ ನಾನು ಎಷ್ಟು ಬೆರಳುಗಳನ್ನು ಸಂಗ್ರಹಿಸಿದ್ದೆನೋ ಗೊತ್ತಿರಲಿಲ್ಲ. ಒಮ್ಮೆ ಎಣಿಸೋಣವೆಂದು ನೋಡುತ್ತೇನೆ ಅರ್ಧಕ್ಕರ್ಧ ಬೆರಳುಗಳನ್ನು ಯಾವುದೋ ಪ್ರಾಣಿಯೋ, ಇಲಿಯೋ, ಇರುವೆಗಳೋ ಹೊತ್ತೊಯ್ದುಬಿಟ್ಟವೆ! ಹೀಗಾದರೆ ನನ್ನ ಗುರುದಕ್ಷಿಣೆಯನ್ನು ತೀರಿಸುವುದೆಂತು ಎಂದುಕೊಂಡು ಬಳ್ಳಿಯಿಂದ ಒಂದೊಂದೇ ಬೆರಳನ್ನು ಗಂಟುಹಾಕುತ್ತ ಹಾರದಂತೆ ಮಾಡಿಕೊಂಡು ಅವುಗಳ ರಕ್ಷಣೆಗೆಂದು ಅದನ್ನು ಕೊರಳಿಗೇ ಹಾಕಿಕೊಂಡು ತಿರುಗಾಡಲಾರಂಭಿಸಿದ್ದೆ. ಯಾವಾಗ ಬೆರಳುಗಳ ಮಾಲೆಯನ್ನು ಧರಿಸಲಾರಂಭಿಸಿದೆನೋ ಆಗ ನನ್ನ ಮೂಲ ಹೆಸರೇ ಮರೆಯಾಗಿ ಅಂಗುಲಿಮಾಲಾ ಎಂಬುದೇ ಪ್ರಚಲಿತವಾಯಿತು. ಹೀಗೆ ಸಾವಿರ ಅಂಗುಲಿಗಳನ್ನು ಸಂಗ್ರಹಿಸುವಲ್ಲಿ ಇನ್ನೊಂದೇ ಒಂದು ಬಾಕಿ ಇತ್ತು. ಆ ಕೊನೆಯ ಒಂದು ಬೆರಳನ್ನು ಕತ್ತರಿಸಿಬಿಟ್ಟರೆ ಸಾಕು, ಸಾವಿರದ ಆ ಹಾರವನ್ನು ಗುರುಗಳಿಗೆ ಹಾಕಿ ಮತ್ತಾವ ಮಾತಿಗೂ ಸಿಕ್ಕದೇ ಹೊರಟುಬಿಡಬಹುದೆಂದು ಬಹಳ ಕಾತರನಾಗಿದ್ದೆ. ಎಷ್ಟೋ ದಿನ ಆಗಿತ್ತು ಸ್ನಾನ ಮಾಡಿ. ಅವರಿವರನ್ನು ದಂಡಿಸುವಾಗ ಸಿಡಿದ ಆ ರಕ್ತ, ಅವರು ಪ್ರತಿಭಟಿಸುವಾಗ ನನ್ನಲ್ಲೂ ಉಂಟಾಗುತ್ತಿದ್ದ ಗಾಯಗಳೆಲ್ಲದರಿಂದ ನನಗೂ ಜಳಕ ಮಾಡುವುದು ಸಾಧ್ಯವಾಗಿರಲಿಲ್ಲ. ಅಲ್ಲದೆ ಕತ್ತಿನಲ್ಲಿದ್ದ ಅಂಗುಲಿಮಾಲೆಯನ್ನು ಕೆಳಗೆ ತೆಗೆದಿರಿಸಿ ನೀರಿಗಿಳಿದರೆ ಯಾವುದಾದರೂ ಮಾಂಸಾಹಾರಿ ಪ್ರಾಣಿ ಅದನ್ನು ಅಪಹರಿಸಿಬಿಟ್ಟರೆ ಮುಗಿದೇ ಹೋಯಿತು, ಮತ್ತೆ ಮೊದಲಿನಿಂದ ಶುರು ಮಾಡಬೇಕಾಗುತ್ತದೆ ಎಂಬ ಭಯವೂ ನನ್ನನ್ನು ಕಾಡುತ್ತಿತ್ತು.

(ಸಶೇಷ)